**ಇಂದು ದಿನಾಂಕ:15.04.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಕೆ.ಆರ್.ಕೆ. ವಕೀಲರಿಂದಃ**

ನನ್ನ ತಾತನ ಹೆಸರು ಕಾಳೇಗೌಡ ಅವರ ತಂದೆಯ ಹೆಸರು ಹೆಳವೇಗೌಡ. ನನ್ನ ತಾತನಿಗೆ 2 ಎಕರೆ 28 ಗುಂಟೆ ಜಮೀನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇಲ್ಲ. ದಾವಾ ಆಸ್ತಿ ನನ್ನ ತಾತನ ಪಿತ್ರಾರ್ಜಿತ ಆಸ್ತಿ. ನನ್ನ ಮುತ್ತಾತ ಹೆಳವಯ್ಯನ ಹೆಸರಿನಲ್ಲಿ ಎಷ್ಟು ಜಮೀನು ಇತ್ತು ಎಂದು ಗೊತ್ತಿಲ್ಲ. ನನ್ನ ಮುತ್ತಾತನ ತಂದೆಯ ಹೆಸರು ಕೆಂಪಯ್ಯ ಎಂದರೆ ಅಷ್ಟೊಂದು ಸರಿಯಾಗಿ ಗೊತ್ತಿಲ್ಲ. ಹೆಳವಯ್ಯನವರಿಗೆ ಇಬ್ಬರು ಮಕ್ಕಳು ಅವರೆಂದರೆ ಕೆಂಪೇಗೌಡ ಮತ್ತು ಕಾಳೇಗೌಡ. ಅವರಿಬ್ಬರು ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು. ನನ್ನ ಅಜ್ಜಿ ನಿಂಗಮ್ಮ ಪಿರಿಯಾಪಟ್ಟಣದ ಕಾವಡಗೆರೆ ಬೀದಿಯಲ್ಲಿರುವ ಒಂದು ಹೆಂಚಿನ ಮನೆಯಲ್ಲಿ ವಾಸ ಮಾಡುತ್ತಿದ್ದರು. ನಾನು ಅದೇ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ಬೇರೆ ವಾಸವಿದ್ದೇನೆ. ನನ್ನ ಅಜ್ಜಿ ವಾಸವಿದ್ದ ಮನೆಯಲ್ಲಿ ಈಗ ನನ್ನ ತಾಯಿ ವಾಸವಿದ್ದಾರೆ. ಕಾವಡಗೆರೆ ಬೀದಿಯಲ್ಲಿರುವ ಮನೆ ಪಿತ್ರಾರ್ಜಿತವಾಗಿ ಬಂದಿತ್ತು ಎಂದರೆ ಸರಿಯಾಗಿ ಗೊತ್ತಿಲ್ಲ. ಆ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸುತ್ತೇನೆ. ಕಾವಡಗೆರೆ ಬೀದಿಯಲ್ಲಿ ವಾಸವಿರುವ ಬಗ್ಗೆ ನಾನು ವಾದ ಪತ್ರದಲ್ಲಿ ಬರೆಸಿಲ್ಲ. ಕಾವಡಗೆರೆ ಬೀದಿಯಲ್ಲಿದ್ದ ಮನೆಯಿಂದ ಬೇರೆ ಮನೆಗೆ ಹೋಗಿ 8-9 ವರ್ಷಗಳಾಗಿವೆ. ಈಗ ಸಣ್ಣಯ್ಯನ ಬೀದಿಯಲ್ಲಿ ವಾಸವಿದ್ದೇನೆ. ವಾದಿಗೆ ಮದುವೆಯಾಗಿ 6-7 ವರ್ಷವಾಗಿದೆ. ಅವರ ಮದುವೆ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಆಗಿದೆ. ವಾದಿಯ ಮದುವೆಯಾದಾಗ ನನ್ನ ತಂದೆ ಬದುಕಿರಲಿಲ್ಲ. ನನ್ನ ತಂದೆ 2015 ರಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆಯ ಮರಣ ದೃಢೀಕರಣ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ತಂದೆ ಇದ್ದಾಗಲೇ ವಾದಿಯ ವಿದ್ಯಾಭ್ಯಾಸ ಮಾಡಿಸಿದ್ದರು. ವಾದಿಯ ಮದುವೆಯನ್ನು ನನ್ನ ತಾಯಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಕೃಷಿ ಕೆಲಸ ಮಾಡುತ್ತಿದ್ದರು. ನನ್ನ ಗೂಡ್ಸ ವ್ಯಾನ್ ಓಡಿಸುತ್ತಿರಲಿಲ್ಲ. ಸ.ನಂ.69/6 ನನ್ನ ತಾಯಿಯ ಹೆಸರಿನಲ್ಲಿದೆ. ಸ.ನಂ.69/7 ಪ್ರತಿವಾದಿ 4 ರವರ ಹೆಸರಿನಲ್ಲಿದೆ. ಸ.ನಂ.69/8 ಪ್ರತಿವಾದಿ 4 ಮತ್ತು 5 ರವರ ಹೆಸರಿನಲ್ಲಿದೆ. ಸ.ನಂ.69/7 ಮತ್ತು

69/8 ಪ್ರತಿವಾದಿ 4 ಮತ್ತು 5 ರವರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ ನಾವು ಕೂಡ ವ್ಯವಸಾಯ ಮಾಡುತ್ತೇವೆ. ಆ ಬಗ್ಗೆ ದಾಖಲೆ ಇರುವುದಿಲ್ಲ. ಅವರೆಲ್ಲರೂ ಯಾವ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ಅದನ್ನು ಪರಿಶೀಲನೆ ಮಾಡಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸ.ನಂ.69/7 ಮತ್ತು 69/8 ನನ್ನ ಮತ್ತು ನನ್ನ ತಾಯಿಯ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿಗೆ ದಿನಾಂಕ 27.12.2006 ರ ಕ್ರಯ ಪತ್ರವನ್ನು ತೋರಿಸಿ ಅದರಲ್ಲಿರುವ ಎರಡೂ ಪೊಟೋಗಳನ್ನು ನೋಡಿ ಸದರಿ ಪೋಟೋಗಳು ನನ್ನ ತಂದೆ ಮತ್ತು ತಾಯಿ ಪೋಟೋ ಎಂದು ಗುರುತಿಸಿದ ಮೇರೆಗೆ ಕ್ರಯ ಪತ್ರವನ್ನು ನಿ.ಡಿ–1, ಸಾಕ್ಷಿಯ ತಂದೆ ಮತ್ತು ತಾಯಿಯ ಪೋಟೋಗಳನ್ನು ನಿ.ಡಿ–1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕ 31.12.2011 ರ ಮತ್ತೊಂದು ಕ್ರಯ ಪತ್ರವನ್ನು ನೋಡಿ ಅದರಲ್ಲಿರುವ ತನ್ನ ತಾಯಿಯ ಪೋಟೋವನ್ನು ಗುರುತಿಸಿದ ಮೇರೆಗೆ ಸದರಿ ಕ್ರಯ ಪತ್ರವನ್ನು ನಿ.ಡಿ–2 ಮತ್ತು ಸಾಕ್ಷಿಯ ತಾಯಿಯ ಪೋಟೋವನ್ನು ನಿ.ಡಿ–2(ಎ) ಎಂದು ಗುರುತಿಸಲಾಯಿತು. ದಿನಾಂಕ 27.12.2006 ರಂದು ನನ್ನ ತಂದೆ, ತಾಯಿ ಮತ್ತು ಅಜ್ಜಿ ಮೂರು ಜನರು ಸೇರಿ ದಾವಾ ಷೆಡ್ಯೂಲ್ ಆಸ್ತಿ ಪೂರ್ತಿ ವಿಸ್ತೀರ್ಣ 2 ಎಕರೆ 8 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಕ್ರಯ ಪತ್ರದ ಮೇರೆಗೆ 3 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಅಂದಿನಿಂದಲೂ ಸ್ವಾಧೀನವಿದ್ದಾರೆ ಎಂದರೆ ಗೊತ್ತಿಲ್ಲ. 3 ನೇ ಪ್ರತಿವಾದಿ ಖರೀದಿಸಿದ್ದ 2 ಎಕರೆ 8 ಗುಂಟೆ ಪೈಕಿ 4 ನೇ ಪ್ರತಿವಾದಿಗೆ ದಿನಾಂಕ 28.05.2008 ರಂದು 1 ಎಕರೆ 10 ಗುಂಟೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಕ್ರಯ ಪತ್ರದ ಮೇರೆಗೆ 4 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಅಂದಿನಿಂದಲೂ ಸ್ವಾಧೀನವಿದ್ದಾರೆ ಎಂದರೆ ಗೊತ್ತಿಲ್ಲ. ದಿನಾಂಕ 17.06.2008 ರಂದು 4 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ನೊಂದಣಿಯಾಗಿದೆ ಎಂದರೆ ಸುಳ್ಳು. 3 ನೇ ಪ್ರತಿವಾದಿಯ ಹೆಸರಿನಲ್ಲಿ ಉಳಿದಿದ್ದ 1 ಎಕರೆ 18 ಗುಂಟೆ ಜಮೀನನ್ನು ಪುನಃ ದಿನಾಂಕ 28.05.2008 ರಂದು ನನ್ನ ತಾಯಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ

ಹೆಸರಿಗೆ ಆಗಿರುವ ಕ್ರಯ ಪತ್ರ ದಿನಾಂಕ 17.06.2008 ರಂದು ನೊಂದಣಿಯಾಗಿದೆ ಎಂದರೆ ಸುಳ್ಳು. ಆ ನಂತರ ನನ್ನ ತಾಯಿ ದಿನಾಂಕ 02.01.2012 ರಂದು 1 ಎಕರೆ 10 ಗುಂಟೆಯನ್ನು ಪ್ರತಿವಾದಿ 4 ಮತ್ತು 5 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಆ ನಂತರ ಅದೇ ಜಮೀನು ಸ.ನಂ.67/8 ಎಂದು ಪೋಡು ಆಗಿದೆ ಎಂದರೆ ಸುಳ್ಳು. ಆ ನಂತರ 4 ಮತ್ತು 5 ರವರೆ ಸ್ವಾಧೀನವಿದ್ದಾರೆ ಎಂದರೆ ಸುಳ್ಳು. ದಾವಾ ಸ.ನಂ.69/7 ಮತ್ತು 69/8 ರಲ್ಲಿ ನನಗಾಗಲೀ ವಾದಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕ್ ಸಾಲ ಮತ್ತು ಕೈ ಸಾಲ ತೀರಿಸಲು ಹಾಗೂ ಗೂಡ್ಸ ವ್ಯಾನ್ ಖರೀದಿಸಲು ನನ್ನ ತಂದೆ ನಿ.ಡಿ-1 ಮತ್ತು 2 ಪ್ರಕಾರ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಸ.ನಂ.69/7 ಮತ್ತು 69/8 ಈಗಾಗಲೇ ಮಾರಾಟ ಮಾಡಿದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕ್ಕವನಾಗಿದ್ದಾಗ ನನ್ನ ಅಜ್ಜಿ ಮತ್ತು ತಾತ ಎಲ್ಲ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ತಾಯಿ ಮತ್ತು ಅಜ್ಜಿ ಮೂರು ಜನ ಸೇರಿ ನನ್ನ ಮತ್ತು 1 ನೇ ವಾದಿಯ ವಿದ್ಯಾಭ್ಯಾಸ ಮಾಡಿಸಿದ್ದಾರೆ ಎಂದರೆ ಸುಳ್ಳು. ದಾವಾ ಆಸ್ತಿಗಳಲ್ಲಿ ನಾನು ಸ್ವಾಧೀನ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ನನ್ನ ತಾಯಿಯ ಜೊತೆ ಒಟ್ಟಾಗಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ವಾಸವಿದ್ದ ಮನೆ ಪಿತ್ರಾರ್ಜಿತ ಆಸ್ತಿಯಾಗಿದ್ದು ಅದನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**